# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 458 |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | 10-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳ ಹುದ್ದೆಗಳು ಖಾಲಿ ಇರುವುದರಿಂದ ದೀರ್ಘಕಾಲಿಕ ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆ ಲಭಿಸದೇ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು) | ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರ ಹುದ್ದೆಗಳು ಇರುವುದಿಲ್ಲ.<br>• ತಜ್ಞ ವೈದ್ಯರ ಸೇವೆಯನ್ನು ಸಾರ್ವಜನಿಕರಿಗೆ ನೀಡಲು ಈಗಾಗಲೇ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ 166 ತಜ್ಞವೈದ್ಯರ ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜನೆಮಾಡಿ ಸುಮಾರು 83 ತಾಲ್ಲೂಕು ಆಯುಷ್ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಪ್ರಸ್ತುತ 129 ತಜ್ಞ ವೈದ್ಯರುಗಳನ್ನು ಯೋಜನೆ ಇರುವವರೆಗೆ ತಾತ್ಕಾಲಿಕವಾಗಿ ವಿವಿಧ ಪದ್ಧತಿಗಳಲ್ಲಿ ನೇಮಿಸಿಕೊಂಡು ಆಯುಷ್ ಚಿಕಿತ್ಸಾ ಪದ್ಧತಿಗಳಾದ ಶಲ್ಯ, ಶಾಲಕ್ಯ, ಪಂಚಕರ್ಮ, ದ್ರವ್ಯಗುಣ, ರಸಶಾಸ್ತ್ರ, ಇತ್ಯಾದಿ ವಿಶೇಷ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.<br>• ಪ್ರಸ್ತುತ ಇಲಾಖೆಯಲ್ಲಿ 180 ಖಾಯಂ ವೈದ್ಯರುಗಳು ಸ್ನಾತಕೋತ್ತರ ಪದವಿ ಪಡೆದ ವೈದ್ಯರು ಸೇರಿದಂತೆ 129 ಗುತ್ತಿಗೆ ಆಧಾರದ ಸ್ನಾತಕೋತ್ತರ ಪದವಿ ಪಡೆದ ವೈದ್ಯರು ರಾಜ್ಯಾದ್ಯಂತ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಲ್ಲಿ ತಮ್ಮ ತಜ್ಞತೆಯಲ್ಲಿ ಚಿಕಿತ್ಸೆ ನೀಡುತ್ತಿದ್ದು, ಸದರಿ ಚಿಕಿತ್ಸೆಗಳ ಮೂಲಕ ದೀರ್ಘಕಾಲಿಕ ರೋಗಗಳಾದ ಸಕ್ಕರೆ ಖಾಯಿಲೆ, ಪಾರ್ಶವಾಯು, ಹೈಪರ್ ಟೆನ್ಶನ್ ಮತ್ತು ಆರ್ಥ್ರೈಟಿಸ್, ಅಸ್ತಮ, ಒಬೆಸಿಟಿ ಮತ್ತು ಇತರ ಖಾಯಿಲೆಗಳಿಗೆ ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಕಳೆದ ಸಾಲಿನಲ್ಲಿ ಸರ್ಕಾರಿ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳ ಮೂಲಕ ಚಿಕಿತ್ಸೆ ಪಡೆದ ಒಟ್ಟಾರೆ ರೋಗಿಗಳ ಸಂಖ್ಯೆ ಹಾಗೂ ಪಂಚಕರ್ಮ, ಕ್ಷಾರ ಕರ್ಮ, ಉಪಕರ್ಮ ಇತ್ಯಾದಿ ವಿವಿಧ ಚಿಕಿತ್ಸಾವಿಧಾನಗಳನ್ನು ನಿರ್ವಹಿಸಿದ ವಿವರ ಈ ಕೆಳಕಂಡಂತಿದೆ. |

| ವರ್ಷ | ಹೊರ ರೋಗಿಗಳ ಸಂಖ್ಯೆ | ಒಳ ರೋಗಿಗಳ ಸಂಖ್ಯೆ | ನಿರ್ವಹಿಸಿದ ಚಿಕಿತ್ಸಾ ವಿದಾನಗಳ ಸಂಖ್ಯೆ |
|---|---|---|---|
| **2022-23** | 4929993 | 29005 | 1627604 |
| **2023-24** | 5373886 | 45117 | 2378762 |
| **2024-25** | 5135811 | 49529 | 2161077 |

**ಆ)** ಆಯುಷ್ ಇಲಾಖೆಯಲ್ಲಿ ಖಾಯಂ ತಜ್ಞ ವೈದ್ಯರುಗಳು ಇಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೋಟ್ಯಾಂತರ ರೂಪಾಯಿ ಅನುದಾನಗಳು ಸಮರ್ಪಕವಾಗಿ ವಿನಿಯೋಗವಾಗುತ್ತಿಲ್ಲ ಎಂಬುದು ನಿಜವೇ; ನಿಜವಾಗಿದ್ದಲ್ಲಿ ವಿನಿಯೋಗಿಸಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

- ಆಯುಷ್ ಇಲಾಖೆಯಲ್ಲಿ ತಜ್ಞ ವೈದ್ಯರು ಎಂಬ ಪದನಾಮದೊಂದಿಗೆ ಯಾವುದೇ ಖಾಯಂ ಹುದ್ದೆಗಳು ಇರುವುದಿಲ್ಲ. ಆದಾಗ್ಯೂ ಇಲಾಖೆಯಲ್ಲಿ 180 ವಿವಿಧ ಪದ್ಧತಿ ಮತ್ತು ತಜ್ಞತೆಯಲ್ಲಿ ಸ್ನಾತ್ತಕೋತ್ತರ ಪದವಿ ಪಡೆದ ಖಾಯಂ ವೈದ್ಯರುಗಳು ರಾಜ್ಯಾದ್ಯಂತ ಆಯುಷ್ ಆಸ್ಪತ್ರೆ ಮತ್ತು ಚಿಕಿತ್ಸಾಲಯ/ ಆಯುಷ್ ಆರೋಗ್ಯ ಮಂದಿರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.
- ಅಲ್ಲದೇ ಕೇಂದ್ರ ಪುರಸ್ಕೃತ ಯೋಜನೆ ರಾಷ್ಟ್ರೀಯ ಆಯುಷ್ ಅಭಿಯಾನದಡಿ ಒಟ್ಟು 83 ಆಸ್ಪತ್ರೆಗಳನ್ನು ಜಿಲ್ಲಾ/ ತಾಲ್ಲೂಕು ಮಟ್ಟದಲ್ಲಿ ಮೇಲ್ದರ್ಜೆಗೇರಿಸಲಾಗಿದ್ದು, ಪ್ರತಿ ಆಸ್ಪತ್ರೆಗೆ 02 ರಂತೆ ಒಟ್ಟು 166 ತಜ್ಞವೈದ್ಯರ ಹುದ್ದೆಗಳನ್ನು ಹಾಗೂ ಇತರೆ ಅವಶ್ಯಕ ಅರೆ ವೈದ್ಯಕೀಯ ಸಿಬ್ಬಂದಿಗಳಾದ ಮಸಾಜಿಸ್ಟ್, ಔಷಧ ವಿತರಕರು, ಕ್ಷಾರಸೂತ್ರ ಮತ್ತು ಸ್ತ್ರೀ ರೋಗ ಅಟೆಂಡರ್ ಸೇರಿದಂತೆ ಒಟ್ಟು 664 ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಿಕೊಂಡು, ಗುತ್ತಿಗೆ ಆಧಾರದ ಮೇಲೆ 525 ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನೇಮಕಮಾಡಿಕೊಂಡು ಯೋಜನೆ ಇರುವವರೆಗೆ ಇವರ ಸೇವೆಯನ್ನು ಪಡೆಯಲಾಗುತ್ತಿದೆ.
- ಆಯುಷ್ ವೈದ್ಯಕೀಯ ಸೇವೆಗಳನ್ನು ಪರಿಣಾಮಕಾರಿಯಾಗಿ ನೀಡಲು ಗುತ್ತಿಗೆ ತಜ್ಞ ವೈದ್ಯರ ಸಂಚಿತ ವೇತನ ಹಾಗೂ ಇತರೆ ಗುತ್ತಿಗೆ ಸಿಬ್ಬಂದಿಗಳ ಸಂಚಿತ ವೇತನ, ನಿರ್ವಹಣೆ ಔಷಧಿ ಯೋಗ ತರಬೇತುದಾರರ ಸಂಚಿತ ವೇತನ ಆಯುಷ್ ಆರೋಗ್ಯ ಮಂದಿರ ಅಭಿವೃದ್ಧಿ ಇತ್ಯಾದಿ ರಾಜ್ಯ ಮತ್ತು ಕೇಂದ್ರದ ಪಾಲಿನ ರೂಪದಲ್ಲಿ ಇಲಾಖೆಗೆ ಕಳೆದ 03 ವರ್ಷಗಳಿಂದ ಬಿಡುಗಡೆಯಾದ ಅನುದಾನವು ಸಮರ್ಪಕವಾಗಿ ವಿನಿಯೋಗಿಸಲಾಗುತ್ತಿದೆ. ಬಿಡುಗಡೆ, ವೆಚ್ಚ ಹಾಗೂ ಉಳಿಕೆ ವಿವರಗಳು ಈ ಕೆಳಕಂಡಂತಿದೆ.

**(ರೂ. ಲಕ್ಷಗಳಲ್ಲಿ)**

| ಒಟ್ಟು ಬಿಡುಗಡೆ | ವೆಚ್ಚ | ಉಳಿಕೆ |
|---|---|---|
| 17369.015 | 14883.503 | 2485.512 |

**(ಇ)** ಆಯುಷ್ ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಿಗೆ ಖಾಯಂ ತಜ್ಞ ವೈದ್ಯರುಗಳ ನೇಮಕಗೊಳಿಸಲು ಬಜೆಟ್‌ನಲ್ಲಿ ಮೀಸಲಿಡಲಾದ ಅನುದಾನವೆಷ್ಟು? (ವಿವರ ನೀಡುವುದು)

- ಆಯುಷ್ ಇಲಾಖೆಯಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಿಗೆ ಖಾಯಂ ತಜ್ಞ ವೈದ್ಯರುಗಳ ಹುದ್ದೆ ಸೃಜನೆಯಾಗಿಲ್ಲದಿರುವುದರಿಂದ ಬಜೆಟ್‌ನಲ್ಲಿ ಯಾವುದೇ ಅನುದಾನ ಮೀಸಲಿರಿಸಿರುವುದಿಲ್ಲ.
- ಹಾಲಿ ರಾಜ್ಯದಲ್ಲಿ ಸ್ನಾತ್ತಕೋತ್ತರ ತಜ್ಞತೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ 180 ಖಾಯಂ ವೈದ್ಯರುಗಳಲ್ಲಿ 64 ವೈದ್ಯರು ಚಿಕಿತ್ಸಾಲಯದ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ವೈದ್ಯರನ್ನು ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಮರುವಿನ್ಯಾಸಗೊಳಿಸಿ ತೈನಾತಿಸುವ ಮೂಲಕ ತಜ್ಞ ಚಿಕಿತ್ಸೆಗಳ ಸೌಲಭ್ಯವನ್ನು ಸಾರ್ವಜನಿಕರಿಗೆ ನೀಡಲಾಗುವುದು.

ಸಂಖ್ಯೆ: ಆಕುಕ 56 ಪಿಟಿಡಿ 2025

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು